**ಕರ್ನಾಟಕ ಸರ್ಕಾರ**
**ಕರ್ನಾಟಕ ಪರೀಕ್ಷಾ ಪ್ರಾಧಿಕಾರ**
**ಸಿಇಟಿ-2018 – ಆಯುಷ್ ಕೋರ್ಸುಗಳಿಗೆ ನೀಟ್ ಪರ್ಸಂಟೈಲ್ ಸಡಿಲಗೊಳಿಸಿ – ಸೀಟು ಹಂಚಿಕೆ ಸೂಚನೆಗಳು**
ಆಯ್ಕೆ ದಾಖಲಿಸುವ ವೇಳಾಪಟ್ಟಿ

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.8/2017-18 ದಿನಾಂಕ: 05-11-2018

ಭಾರತ ಸರ್ಕಾರವು 2018ನೇ ಸಾಲಿಗೆ ಆಯುಷ್ ಕೋರ್ಸುಗಳ ಪ್ರವೇಶಾತಿಗೆ ನಿಗದಿಪಡಿಸಲಾದ ನೀಟ್ ಪರ್ಸಂಟೈಲ್ ಅನ್ನು ಸಡಿಲಗೊಳಿಸಿ ಆದೇಶಿಸಿರುವ ಹಿನ್ನಲೆಯಲ್ಲಿ ಆಯುಷ್ ಇಲಾಖೆ, ಬೆಂಗಳೂರು ತಮ್ಮ ಪತ್ರ ಸಂಖ್ಯೆ 05-11-2018ರಲ್ಲಿ ಖಾಲಿ ಇರುವ ಆಯುಷ್ ಕೋರ್ಸುಗಳಿಗೆ ಸೀಟು ಹಂಚಿಕೆಯನ್ನು ಮಾಡಲು ಕೋರಿರುತ್ತಾರೆ. ಸಡಿಲಗೊಳಿಸಿರುವ ನೀಟ್ ಪರ್ಸಂಟೈಲ್ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಈ ಸುತ್ತಿನಲ್ಲಿ, Mop-up ಸುತ್ತಿನ ಸೀಟು ಹಂಚಿಕೆಯ ನಂತರ ಆಯುಷ್ ಇಲಾಖೆಯವರು ನೀಡಿದ ಸೀಟುಗಳನ್ನು ಹಂಚಿಕೆ ಮಾಡಲಾಗುವುದು. ನೀಟ್ ಪರ್ಸಂಟೈಲ್ ಅನ್ನು ಸಡಿಲಗೊಳಿಸಿರುವ ಕಾರಣದಿಂದ ಆಯುಷ್ ಕೋರ್ಸುಗಳಿಗೆ ಅರ್ಹತೆಯನ್ನು ಪಡೆಯುವ ಅಭ್ಯರ್ಥಿಗಳು ಇಲ್ಲಿಯವರೆಗೆ ಪ್ರಾಧಿಕಾರದಲ್ಲಿ ಅರ್ಜಿಯನ್ನು ಸಲ್ಲಿಸದೇ ಇರುವ ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ ಹಾಗು ದಾಖಲಾತಿ ಪರಿಶೀಲನೆಗೆ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ದಿನಾಂಕ 09-11-2018 ರಂದು ಪ್ರಾಧಿಕಾರ ಬೆಂಗಳೂರು ಇಲ್ಲಿ ಹಾಜರಾಗಬಹುದಾಗಿದೆ. ಈಗಾಗಲೇ ದಾಖಲಾತಿ ಪರಿಶೀಲನೆಯನ್ನು ಪೂರ್ಣಗೊಳಿಸಿರುವವರು ಮತ್ತೊಮ್ಮೆ ದಾಖಲಾತಿ ಪರಿಶೀಲನೆಗೆ ಹಾಜರಾಗುವಂತಿಲ್ಲ.

ಈ ಮೇಲಿನ ಅಭ್ಯರ್ಥಿಗಳ ಜೊತೆಯಲ್ಲಿ ಆಯುಷ್ ಕೋರ್ಸುಗಳಿಗೆ ಮೊದಲೇ ಅರ್ಹತೆಯನ್ನು ಪಡೆದವರೂ ಸಹ ಭಾಗವಹಿಸಬಹುದು, ಆದರೆ ಈ ಕೆಳಗಿನ ಅಭ್ಯರ್ಥಿಗಳು ಭಾಗವಹಿಸಲು ಅರ್ಹತೆ ಇರುವುದಿಲ್ಲ.

1. ಹಿಂದಿನ ಸುತ್ತುಗಳಲ್ಲಿ ಆಯುಷ್ ಕೋರ್ಸುಗಳಿಗೆ ಸೀಟು ಹಂಚಿಕೆ ಮಾಡಿಕೊಂಡವರು ಭಾಗವಹಿಸಲು ಅರ್ಹರಿರುವುದಿಲ್ಲ.
2. ಹಿಂದಿನ ಸುತ್ತುಗಳಲ್ಲಿ ಯಾವುದೇ ಕೋರ್ಸುಗಳಿಗೆ ಸೀಟು ಹಂಚಿಕೆ ಮಾಡಿ ಈಗಾಗಲೇ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ಅಭ್ಯರ್ಥಿಗಳು ಭಾಗವಹಿಸಲು ಅರ್ಹರಿರುವುದಿಲ್ಲ.

ಇಚ್ಚೆಯುಳ್ಳ ಅರ್ಹ ಅಭ್ಯರ್ಥಿಗಳು ಈ ಕೆಳಗಿನ ವೇಳಾಪಟ್ಟಿಯಂತೆ ಹೊಸದಾಗಿ ಇಚ್ಚೆ / ಆಯ್ಕೆಯನ್ನು ದಾಖಲಿಸಿ ಈ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.

| Sl. No. | Particulars | Date and Time |
|---|---|---|
| 01 | Registration only by new candidates (those who have not registered with KEA) | From 8.00 pm on 05-11-2018 to 09-11-2018 up to 9.00 am |
| 02 | Verification of documents – Only at KEA, Bangalore | 09-11-2018 (11.30 am to 1.00 pm) |
| 03 | Option Entry by Eligible Candidates | From 2.00 pm on 09-11-2018 to 12-11-2018 up to 8.00 am |
| 04 | Publication of Seat Allotment Results | 12-11-2018 after 1.00 pm |
| 05 | Confirmation of Allotment, Payment of Fees and Downloading of Admission Order | From 3.00 pm on 12-11-2018 to 13-11-2018 up to 4.00 pm |
| 06 | Last date for reporting to college | 13-11-2018 before 5.30 pm |

**ಸೂಚನೆ:**

ಈ ಸುತ್ತಿನಲ್ಲಿ ಅಭ್ಯರ್ಥಿಗಳು ಆಯುಷ್ ಕೋರ್ಸುಗಳಿಗೆ ಹೊಸದಾಗಿ ಇಚ್ಚೆ / ಆಯ್ಕೆ ಅನ್ನು ದಾಖಲಿಸಬೇಕು. ಈ ಮೊದಲು ದಾಖಲಿಸಿದ್ದ ಆಪ್ಷನ್ ಗಳನ್ನು ಪರಿಗಣಿಸಲಾಗುವುದಿಲ್ಲ.

ಕಾರ್ಯನಿರ್ವಾಹಕ ನಿರ್ದೇಶಕರ ಪರವಾಗಿ